


# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)



ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೩೧

ಡಿಸೆಂಬರ್ ೨೮ರಂದು (೧೯೩೮) ಸ್ವಾಮಿ ಶಾರದಾನಂದರ ಜನ್ಮದಿನ. ಆ ನಿಮಿತ್ತ ಅಂದು ಸಂಜೆ ಒಂದು ಸಣ್ಣ ಸಭೆ ಸೇರಿತು. ಎಲ್ಲರಿಗೂ ಮಠಾಧ್ಯಕ್ಷರ ಬಾಯಿಂದ ಏನಾದರೂ ಕೇಳಬೇಕೆಂಬ ಮಹದಾಸೆ. ವಿರಜಾನಂದರೂ ಅದಕ್ಕೊಪ್ಪಿ, ಸ್ವಾಮಿ ಶಾರದಾನಂದರೊಂದಿಗಿನ ತಮ್ಮ ಅನೇಕ ವ್ಯಕ್ತಿಗತ ನೆನಪುಗಳನ್ನು ಬಣ್ಣಿಸಿದರು. ಮಾರನೇ ದಿನ ಹೌರಾದ 'ವಿವೇಕಾನಂದ ಇನ್‌ಸ್ಟಿಟ್ಯೂಷನ್'ನಿಂದ ಆಮಂತ್ರಿತರಾಗಿ ಅಲ್ಲಿ ಸ್ವಾಮೀಜಿಯವರ ಬಗ್ಗೆ ಮಾತನಾಡಿದರು.

ಯೋಗ್ಯ ತೀವ್ರಾಕಾಂಕ್ಷಿಗಳಿಗೆ ದೀಕ್ಷಾದಾನ ಮಾಡುವುದು ಮಠಾಧ್ಯಕ್ಷರ ಪ್ರಮುಖ ಕಾರ್ಯಗಳಲ್ಲೊಂದು. ಅನೇಕ ದೀಕ್ಷಾರ್ಥಿಗಳು ಬರಲಾರಂಭಿಸಿದರು. ಒಂದು ವರ್ಷ ಕಳೆಯುವವರೆಗೂ ತಾವು ವಿಶೇಷವಾದ ಈ ಕಾರ್ಯವನ್ನು ಕೈಗೊಳ್ಳುವುದಿಲ್ಲವೆಂದು ವಿರಜಾನಂದರು ಮೊದಲೇ ಹೇಳಿಬಿಟ್ಟಿದ್ದರು.[೧] ಬೆಳಗ್ಗೆ ಸಂಜೆ ಅವರನ್ನು ಭೇಟಿಯಾಗಲು ಬಂದವರನ್ನು ಸಮಾನಭಾವದಿಂದ ಆದರಿಸಿ, ಧರ್ಮೋಪದೇಶ ನೀಡುತ್ತಿದ್ದರು.

೧೯೩೯ರ ವರ್ಷಾರಂಭ. ಮೊದಲ ದಿನ ವಿರಜಾನಂದರು ತಮ್ಮ ದಿನಚರಿ ಪುಸ್ತಕದಲ್ಲಿ , 'By the grace of Sree Guru Maharaj the new year may bring me peace and blessedness and illumine my soul! May He make me an instrument in His hands and guide and work through me' (ಶ್ರೀ ಗುರು ಮಹಾರಾಜರ ಕೃಪೆಯಿಂದ ಹೊಸವರುಷವೆನಗೆ ಶಾಂತಿ, ಪರಮಾನಂದವನ್ನು ತರಲಿ, ನನ್ನ ಅಂತರ್ಯವನ್ನು ಬೆಳಗಲಿ, ಅವರು ನನ್ನನ್ನು ತಮ್ಮ ಯಂತ್ರವನ್ನಾಗಿ ಮಾಡಿಕೊಂಡು ತನ್ಮೂಲಕ ಅವರೇ ಕಾರ್ಯ ನಿರ್ವಹಿಸಲಿ) ಎಂದು ಬರೆದಿದ್ದಾರೆ.

ಜನವರಿ ೪ರಂದು (೧೯೩೯) ಪೂಜ್ಯ ಹರಿಮಹಾರಾಜರ (ಸ್ವಾಮಿ ತುರೀಯಾನಂದರ) ಜನ್ಮದಿನ. ಅಂದು ವಿರಜಾನಂದರು ಸಾಧು-ಬ್ರಹ್ಮಚಾರಿಗಳೊಂದಿಗೆ ಅವರ ಪುಣ್ಯಸ್ಮರಣೆಗಳನ್ನು ಹಂಚಿಕೊಂಡರು. ಕೆಲವು ದಿನಗಳ ನಂತರ ಎಂಟಾಲಿ ಶ್ರೀರಾಮಕೃಷ್ಣ ಅರ್ಚನಾಲಯದ ಸಮಾರಂಭವೊಂದಕ್ಕೆ ಹೋಗಬೇಕಾಗಿ ಬಂತು. ಅಲ್ಲೊಬ್ಬಾಕೆ ಮಹಾರಾಜರನ್ನು ಬಹಳ ಇಕ್ಕಟ್ಟಿನಲ್ಲಿ ಸಿಲುಕಿಸಿದಳು! ಆಕೆ ಉಬ್ಬಸದ ರೋಗಿ. ಮಹಾರಾಜರನ್ನು ನೋಡಿ 'ತಾಯಿತ' ನೀಡಿ ಎಂದು ಅತ್ತೂ ಕರೆದು ಕಾಡಿದಳು. ತನಗೇನೂ ಅಂತಹ ದಿವ್ಯೌಷಧಗಳು ಗೊತ್ತಿಲ್ಲ ಎಂದು ಆಕೆಗೆ ತಿಳಿಸಿ ಹೇಳಿ ಕೊನೆಗೂ ವಿರಜಾನಂದರು ಪಾರಾದರು!

ಒಂದು ದಿನ ಮಠದ ಬ್ರಹ್ಮಚಾರಿಗಳು ತಮಗೆ ವಿರಜಾನಂದರು ಸ್ವಾಮೀಜಿಯವರ ಬಗ್ಗೆ ತಿಳಿಸಿಕೊಡಬೇಕೆಂದು ಪಟ್ಟು ಹಿಡಿದು ಕುಳಿತರು. ಬ್ರಹ್ಮಚಾರಿಗಳೊಂದಿಗೆ ಒಂದೂವರೆ ಗಂಟೆಗಳ ಕಾಲ ವಿರಜಾನಂದರು ಸ್ವಾಮೀಜಿಯವರ ವಿಷಯ ಮಾತನಾಡಿದರು. ಶ್ರೀರಾಮಕೃಷ್ಣರ ಸಂನ್ಯಾಸೀ ಶಿಷ್ಯರಲ್ಲೊಬ್ಬರಾದ ಸ್ವಾಮಿ ತ್ರಿಗುಣಾತೀತಾನಂದರ ಜನ್ಮದಿನದಂದೂ ಕೂಡ ವಿರಜಾನಂದರು ಮಠವಾಸಿಗಳೊಂದಿಗೆ ಅವರ ನೆನಹುಗಳನ್ನು ಹಂಚಿಕೊಂಡರು. ಮಠಾಧ್ಯಕ್ಷರಾದ ನಂತರ ಸ್ವಾಮಿ ಅಭೇದಾನಂದರೊಂದಿಗೆ ಭೇಟಿಯೇ ಆಗಿರಲಿಲ್ಲ. ಆದ್ದರಿಂದ ಒಂದು ದಿನ ಅವರ ದರ್ಶನ ಪಡೆದು ಅವರ ಸ್ನೇಹ, ಆಶೀರ್ವಾದಗಳನ್ನು ಪಡೆದು ಬಂದರು. ಸ್ವಾಮೀಜಿಯವರ ಎರಡನೇ ಸೋದರನಾದ ಮಹಿಮಬಾಬುರವರೊಡನೆಯೂ ಭೇಟಿಯಾದರು. ಆ 'ಚಾಚಾಜಿ'ಯು ಕಾಲೀಕಿಶನ್‌ನನ್ನು ಸ್ವಾಗತಿಸಿ ಆಲಿಂಗಿಸಿಕೊಂಡರು.

ಮಹಾರಾಷ್ಟ್ರದ ನೇತಾರರಾದ ಎಮ್. ಎಸ್. ಆಣೆ ಎಂಬುವರು ಮಠಕ್ಕೆ ಭೇಟಿಯಿತ್ತರು. ೨೫ ವರ್ಷಗಳ ಹಿಂದೆ ವಿರಜಾನಂದರೊಂದಿಗೆ ಪರಿಚಯವಾಗಿತ್ತು. ಇಷ್ಟು ದೀರ್ಘಕಾಲದ ನಂತರ ಇವರನ್ನು ಕಂಡ ಆಣೆಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಹಿಂದಿನ ಮಠಾಧ್ಯಕ್ಷರಾದ ಸ್ವಾಮಿ ಶುದ್ಧಾನಂದರ ಸ್ಮರಣ ಸಭೆಯೊಂದು ಕೊಲ್ಕತ್ತೆಯಲ್ಲಿ ಆಯೋಜಿತವಾಗಿತ್ತು. ಅದರ ವ್ಯವಸ್ಥಾಪಕರಿಗೆ ವಿರಜಾನಂದರು ತುಂಬ ಉತ್ಸಾಹವನ್ನು ನೀಡಿದರು. ಆದರೆ ಕಾರ್ಯಕ್ರಮದ ದಿನದಂದು ಅನಾರೋಗ್ಯದಿಂದಾಗಿ ಪಾಲ್ಗೊಳ್ಳಲಾಗಲಿಲ್ಲ ; ಸಭೆಯು ಯಶಸ್ವಿಯಾಗಿ ಜರುಗಿತು. ಮತ್ತೊಂದು ದಿನ ವಿರಜಾನಂದರು ಪಾನಿಹಾಟಿಗೆ ಹೋಗಿ ನಿತ್ಯಾನಂದ ಪ್ರಭುಗಳ ವಿಶ್ರಾಂತಿ ಧಾಮವನ್ನೂ, ವಿಖ್ಯಾತವಾದ ವಟವೃಕ್ಷವನ್ನೂ ನೋಡಿಕೊಂಡು ಬಂದರು. ಶಿವರಾತ್ರಿಯಂದು ದೀಕ್ಷೆಯನ್ನು ಪಡೆಯಲು ಅತ್ಯಂತ ವ್ಯಾಕುಲಳಾಗಿದ್ದ ಉತ್ತರ ಪ್ರದೇಶದ ಮಹಿಳೆಯೊಬ್ಬರಿಗೆ ಅವರು ದೀಕ್ಷೆಯನ್ನಿತ್ತರು.

---

೧ ಸ್ವಾಮಿ ವಿರಜಾನಂದರು ತಮ್ಮ ಈ ನಿರ್ಧಾರವನ್ನು ಮುಂದೆ ಬದಲಾಯಿಸಬೇಕಾಯಿತು. ಏಕೆಂದರೆ ಸಿಂಗಾಪುರ್, ರಂಗೂನ್ ಮೊದಲಾದ ವಿದೇಶಗಳಿಂದ ಬರುತ್ತಿದ್ದ ದೀಕ್ಷಾರ್ಥಿಗಳ ಇಷ್ಟಾರ್ಥವನ್ನು ಪೂರೈಸದೆ ಇರಲಾಗಲಿಲ್ಲ.

ಫೆಬ್ರವರಿ ೨೧ರಂದು ಶ್ರೀರಾಮಕೃಷ್ಣರ ಜಯಂತಿ. ಅಂದು ರಾತ್ರಿಯ ಕೊನೆಯ ಯಾಮದಲ್ಲಿ ಬ್ರಹ್ಮಚಾರಿಗಳಿಗೆ ಸಂನ್ಯಾಸ ದೀಕ್ಷೆಯನ್ನೂ ಮತ್ತು ೧೪ ಜನರಿಗೆ ಬ್ರಹ್ಮಚರ್ಯದೀಕ್ಷೆಯನ್ನೂ ನೀಡಿದರು. ಮಠಾಧ್ಯಕ್ಷರಾದ ನಂತರ ಇದೇ ಅವರು ನೀಡಿದ ಮೊದಲ ಸಂನ್ಯಾಸದೀಕ್ಷೆ.

ಒಂದು ದಿನ ಹೊಸ ಸಂನ್ಯಾಸಿಗಳನ್ನೂ, ಬ್ರಹ್ಮಚಾರಿಗಳನ್ನೂ ಕರೆದುಕೊಂಡು ಮಠದ ಅತಿಥಿಗೃಹದಲ್ಲಿ ಉಳಿದುಕೊಂಡಿದ್ದ 'ಟ್ಯಾಂಟೀನ್'ರವರನ್ನು (ಮಿಸ್ ಮ್ಯಾಕ್ಲಿಯಾಡ್– ಭಕ್ತೆಯೂ ಸ್ನೇಹಮಯಿಯೂ ಆದ ಈಕೆಯನ್ನು ಆದರದಿಂದ Tantine (ಸೋದರತ್ತೆ) ಎಂದು ಸಂಬೋಧಿಸುತ್ತಿದ್ದರು) ಭೇಟಿಯಾಗಲು ಹೋದರು. ಅಲ್ಲಿ ಸ್ವಾಮೀಜಿಯವರ ಬಗ್ಗೆ ಬಹಳಷ್ಟು ಮಾತುಕತೆಗಳಾದವು. ಮತ್ತೊಂದು ದಿನ ಮಠದವರೊಂದಿಗೆ ವರಾಹನಗರದ ಹಿಂದಿನ ಅನೇಕ ನೆನಪುಗಳನ್ನು ಹಂಚಿಕೊಂಡರು. ಮಾರ್ಚ್ ೯ರಂದು ಸ್ವಾಮಿ ಯೋಗಾನಂದರ ಜನ್ಮದಿನ. ಸಂಧ್ಯಾರತಿಯ ನಂತರ ವಿರಜಾನಂದರ ಬಳಿ ಸಣ್ಣ ಸಭೆಯೊಂದು ನೆರೆಯಿತು. ಯೋಗಿನ್ ಮಹಾರಾಜರೊಂದಿಗಿನ ಕೆಲವು ವೈಯಕ್ತಿಕ ನೆನಪುಗಳನ್ನು ವಿರಜಾನಂದರು ಹೇಳಿಕೊಂಡರು.

ಬೇಸಿಗೆಯ ಕೆಲವು ತಿಂಗಳನ್ನು ಶ್ಯಾಮಲಾತಾಲ್‌ನಲ್ಲಿ ಕಳೆದು, ದುರ್ಗಾಪೂಜೆಯ ನಂತರ ಉತ್ತರಭಾರತದ ಕೆಲವು ಆಶ್ರಮಗಳಿಗೂ, ಮುಂಬೈ ಕೇಂದ್ರಕ್ಕೂ ಹೋಗಬೇಕೆಂದು ವಿರಜಾನಂದರು ಯೋಚಿಸಿದ್ದರು. ಇತ್ತ ಮದ್ರಾಸಿನಿಂದ ಮತ್ತೆ ಮತ್ತೆ ಇವರಿಗೆ ಕರೆ ಬರಲಾರಂಭಿಸಿತು. ನಿರಾಕರಿಸುವುದು ಕಠಿಣ; ಎಲ್ಲರಿಗೂ ಸಂಘಾಧ್ಯಕ್ಷರ ಮೇಲೆ 'ಪ್ರೀತಿಯ ಹಕ್ಕು' ಇದೆ! ಆದ್ದರಿಂದ ಸ್ವಲ್ಪ ಬೇಗನೆ ಹೊರಟು, ಮದ್ರಾಸಿಗೆ ಮೊದಲು ಹೋಗಿ ಅಲ್ಲಿಂದ ಸೀದಾ ಶ್ಯಾಮಲಾತಾಲ್‌ಗೆ ಹೋಗುವುದೆಂದು ನಿಶ್ಚಯಿಸಿಕೊಂಡರು. ಇವುಗಳ ನಡುವೆ 'ಪಾನಿಹಾಟಿ' ಎಂಬ ವೈಷ್ಣವರ ತೀರ್ಥಸ್ಥಳಕ್ಕೆ ಹೋದರು. ಅಲ್ಲಿಯ 'ಖಡ್‌ದಾಹ್' ಎಂಬಲ್ಲಿ ಇರುವ 'ಶ್ಯಾಮಸುಂದರ' ದೇವರ ದರ್ಶನ ಮಾಡಿ ಹಿಂದಿರುಗುವಾಗ ದಕ್ಷಿಣೇಶ್ವರಕ್ಕೂ ಹೋಗಿಬಂದರು. ಮದ್ರಾಸಿಗೆ ಹೊರಡುವ ಮೊದಲು ಕೇದಾರ್ ಬಾಬಾ (ಉಪಾಧ್ಯಕ್ಷರೂ, ಗುರುಭ್ರಾತರೂ ಆದ ಅಚಲಾನಂದರು) ಮತ್ತು ಕೆಲವು ಸಂನ್ಯಾಸಿಗಳೊಂದಿಗೆ ಬಾಗ್‌ಬಜಾರಿನಲ್ಲಿರುವ 'ಶ್ರೀ ಶ್ರೀ ಮಾಯೇರ್‌ಬಾಡಿ'ಗೆ (ಇದೇ 'ಉದ್ಬೋಧನ'; ಅಥವಾ 'ಶ್ರೀಮಾತೆಯವರ ಮನೆ') ಹೋದರು. ಅಲ್ಲೇ ಹತ್ತಿರದಲ್ಲಿರುವ 'ನಿವೇದಿತಾ ವಿದ್ಯಾಲಯ'ಕ್ಕೂ ಸಹ ಭೇಟಿಯಿತ್ತರು.

ವಿರಜಾನಂದರು ೧೯೩೯ರ ಏಪ್ರಿಲ್ ೯ ರಂದು ಮದ್ರಾಸಿಗೆ ಹೊರಟರು. ಮೊದಲು ಭುವನೇಶ್ವರ ತಲುಪಿದರು. ಬಹು ಪ್ರಾಚೀನವಾದ ಈ ತೀರ್ಥಕ್ಷೇತ್ರದಲ್ಲಿ ಪೂಜ್ಯ ಬ್ರಹ್ಮಾನಂದರಿಂದ ಸ್ಥಾಪಿತವಾದ ಮಠಕ್ಕೆ ಅನೇಕ ದಿನಗಳ ನಂತರ ಬಂದಿದ್ದಾಯಿತು. ತುಂಬ ಸಂತೋಷವಾಯಿತು. ಈ ಕ್ಷೇತ್ರದಲ್ಲಿ ದೀಕ್ಷೆಯನ್ನೂ ನೀಡಬೇಕಾಯಿತು. ದೀಕ್ಷಾರ್ಥಿಗಳಲ್ಲಿ ಅನೇಕ ಒರಿಯಾ ಭಕ್ತರಿದ್ದರು. ಭುವನೇಶ್ವರದಿಂದ ಹೊರಟು ಪುರೀಕ್ಷೇತ್ರವನ್ನು ತಲುಪಿ ಜಗನ್ನಾಥ ಸ್ವಾಮಿಯ ದರ್ಶನ ಪಡೆದರು. ೧೮ರಂದು ವಾಲ್ಟೇರನ್ನು ತಲುಪಿದರು. ಅಲ್ಲಿ ಶ್ರೀರಾಮಕೃಷ್ಣರ ಭಕ್ತರಾದ ವಿಶಾಖಪಟ್ಟಣದ ಶ್ರೀಮಂತ ಕಂಟ್ರಾಕ್ಟರ್ ಶ್ರೀರಾಮಬ್ರಹ್ಮಂ ಎಂಬುವರ ಆತಿಥ್ಯವನ್ನು ಸ್ವೀಕರಿಸಿದರು.

ವಾಲ್ಟೇರಿನ ಒಂದು ಸಣ್ಣ ಬಾಡಿಗೆ ಮನೆಯಲ್ಲಿ ಆಶ್ರಮವು ಪ್ರಾರಂಭವಾಗಿತ್ತು. ಅಲ್ಲಿಯ ಕೆಲವು ಭಕ್ತರೊಡಗೂಡಿ ಅದನ್ನು ನೋಡಿಕೊಂಡು ಬಂದರು. ಭಕ್ತರೊಂದಿಗೆ ಸುಮಾರು ಒಂದೂವರೆ ಗಂಟೆಗಳ ಕಾಲ ಆಧ್ಯಾತ್ಮಿಕ ವಿಚಾರಗಳ ಬಗ್ಗೆ ಮಾತನಾಡಿದರು. ಭಕ್ತರು ಆಂಧ್ರ ವಿಶ್ವವಿದ್ಯಾಲಯವನ್ನೂ ಹಾಗೂ ಅಲ್ಲಿನ ಬಂದರನ್ನೂ ವಿರಜಾನಂದರಿಗೆ ತೋರಿಸಿದರು. ವಿರಜಾನಂದರನ್ನು ಸ್ವಾಗತಿಸಲೆಂದು ಜಿಲ್ಲಾ ನ್ಯಾಯಾಧೀಶರಾದ ಶ್ರೀ ವಿ.ಎಸ್.ವಿ. ಅಯ್ಯರ್‌ರವರ ನೇತೃತ್ವದಲ್ಲಿ ಅಲ್ಲಿಯ ಟೌನ್ ಹಾಲಿನಲ್ಲಿ ಒಂದು ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಮಾರನೇ ದಿನ ಮದ್ರಾಸಿಗೆ (ಚೆನ್ನೈ) ಹೊರಟರು. ಚೆನ್ನೈ ಮಠದ ವತಿಯಿಂದ ಇಬ್ಬರು ಭಕ್ತರು ಮಠಾಧ್ಯಕ್ಷರನ್ನು ಕರೆದುಕೊಂಡು ಹೋಗಲೆಂದು ಆಂಧ್ರಕ್ಕೆ ಬಂದಿದ್ದರು. ಮಾರ್ಗದಲ್ಲಿ ರಾಜಮಹೇಂದ್ರಿ (ಅಥವಾ ರಾಜಾಮುಂಡ್ರಿ) ಮತ್ತು ಗೋದಾವರಿ ನಿಲ್ದಾಣದಲ್ಲಿ ಭಕ್ತರು ಇವರ ದರ್ಶನದ ಅವಕಾಶವನ್ನು ಪಡೆದರು. ರಾಜಮಹೇಂದ್ರಿಯಲ್ಲೊಂದು ಶಾಖೆಯನ್ನು ತೆರೆಯಬೇಕೆಂದು ಅಲ್ಲಿ ನೆರೆದ ಭಕ್ತರು ಕಳಕಳಿಯಿಂದ ಪ್ರಾರ್ಥಿಸಿದರು.[೨]

ಏಪ್ರಿಲ್ ೨೦ರಂದು ಬೆಳಗ್ಗೆ ವಿರಜಾನಂದರು ಚೆನ್ನೈಯನ್ನು ತಲುಪಿದರು. ಅವರನ್ನು ಎದುರುಗೊಳ್ಳಲು ಅಧ್ಯಕ್ಷರಾದ ಸ್ವಾಮಿ ಶಾಶ್ವತಾನಂದರು ಕೆಲವು ಸಂನ್ಯಾಸಿಗಳೂ ಹಾಗೂ ಭಕ್ತರೊಡಗೂಡಿ ರೈಲು ನಿಲ್ದಾಣಕ್ಕೆ ಬಂದಿದ್ದರು. ಅಲ್ಲಿಯೇ ಗ್ರೂಪ್ ಫೋಟೋ ಒಂದನ್ನು ತೆಗೆಯಲಾಯಿತು. ಇವರು ಮದ್ರಾಸಿಗೆ ಬರುವ ಸುದ್ದಿಯನ್ನು 'ಹಿಂದೂ' ಹಾಗೂ 'ಮದ್ರಾಸ್ ಮೇಲ್' ಎಂಬ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿತ್ತು. ಇಪ್ಪತ್ತು ವರ್ಷಗಳ ಹಿಂದೆ ದಕ್ಷಿಣಭಾರತದ ತೀರ್ಥಯಾತ್ರೆ ಮಾಡುತ್ತಿದ್ದಾಗ ಚೆನ್ನೈಗೆ ಬಂದಿದ್ದರು. ಈ ಇಪ್ಪತ್ತು ವರ್ಷಗಳಲ್ಲಿ ಮಠ-ಮಿಷನ್ನಿನ ಕೆಲಸದ ವ್ಯಾಪ್ತಿಯು ಚೆನ್ನಾಗಿ ವಿಸ್ತಾರಗೊಂಡಿರುವುದನ್ನು ಕಂಡು ಬಹಳ ಸಂತುಷ್ಟರಾದರು.

ನಗರದ ಮಾಂಬಲಮ್‌ಪಲ್ಲಿಯಲ್ಲಿ ರಾಮಕೃಷ್ಣ ಮಿಷನ್ ಎರಡು ವಿದ್ಯಾಲಯವನ್ನು ನಡೆಸುತ್ತಿತ್ತು, ಒಂದು ವಿದ್ಯಾರ್ಥಿಗಳಿಗಾಗಿ ಮತ್ತೊಂದು ವಿದ್ಯಾರ್ಥಿನಿಯರಿಗಾಗಿ. ವಿರಜಾನಂದರು ಬಾಲಕರ ಶಾಲೆಯನ್ನು ತಲುಪಿದಾಗ ಅಲ್ಲಿಯ ಎರಡು ಸಾವಿರ ಮಕ್ಕಳು ಇವರನ್ನು ಆದರದಿಂದ ಸ್ವಾಗತಿಸಿದರು. ಶಾಲೆಯ

೨ ಕೆಲವು ವರ್ಷಗಳ ನಂತರ ಸ್ವಾಮಿ ವಿರಜಾನಂದರ ಜೀವಿತಾವಧಿಯಲ್ಲೇ ರಾಜಮಹೇಂದ್ರಿಯಲ್ಲೊಂದು ರಾಮಕೃಷ್ಣ ಮಠ ಸ್ಥಾಪಿತವಾಯಿತು.

ಮುಖ್ಯಸ್ಥರಾದ ಎಪ್ಪತ್ತು ವರ್ಷದ ಶ್ರೀ ವಾಸುದೇವಾಚಾರಿಯಾರ್ ಅವರು ಒಂದು ಚಿಕ್ಕ ಭಾಷಣ ನೀಡಿ ಪೂಜ್ಯ ಅತಿಥಿಗಳಿಗೆ ಸ್ವಾಗತವನ್ನು ಕೋರಿದರು. ಹೂಮಾಲೆಯನ್ನರ್ಪಿಸಿ, ವೇದಮಂತ್ರವನ್ನು ಉಚ್ಚರಿಸುತ್ತ, ವಿವಿಧ ಫಲಗಳನ್ನು ಸಮರ್ಪಿಸಿದರು. ವಿರಜಾನಂದರ ಆದೇಶದ ಮೇರೆಗೆ ಸ್ವಾಮಿ ಶಾಶ್ವತಾನಂದರು ಅವರ ಪ್ರತಿನಿಧಿಯಾಗಿ ಒಂದು ಚಿಕ್ಕ ಭಾಷಣವನ್ನು ಮಾಡಿ, ಎಲ್ಲರಿಗೂ ಧನ್ಯವಾದಗಳನ್ನರ್ಪಿಸಿ, ಆಶೀರ್ವಾದಗಳನ್ನು ತಿಳಿಸಿದರು. ಬಾಲಕಿಯರ ಶಾಲೆಯ ಹೆಸರು ‘ಶಾರದಾ ವಿದ್ಯಾಲಯ’. ಇಲ್ಲಿಯ ವಿದ್ಯಾರ್ಥಿನಿಯರ ಸಂಖ್ಯೆ ಒಂದು ಸಾವಿರ. ಬಾಲಕಿಯರು ಮತ್ತು ಶಿಕ್ಷಕಿಯರು ಸೇರಿ ಮಹಾರಾಜರಿಗೆ ಶ್ರದ್ಧಾ-ಭಕ್ತಿಪೂರ್ವಕವಾಗಿ ಸ್ವಾಗತವನ್ನು ಕೋರಿದರು. ಚಿಕ್ಕ-ಚಿಕ್ಕ ಬಾಲಕಿಯರು ವೀಣೆಯೊಂದಿಗೆ ಸಂಗೀತವನ್ನು ಹಾಡಿದರು. ಇವೆಲ್ಲವನ್ನು ಕಂಡು ಮಹಾರಾಜರು ತುಂಬ ಆನಂದಿಸಿದರು.

ಚೆನ್ನೈ ಮಠದ ಹತ್ತಿರದಲ್ಲೇ ‘ರಾಮಕೃಷ್ಣ ಮಿಷನ್ ಸ್ಟೂಡೆಂಟ್ಸ್ ಹೋಮ್’[೩] ಎಂಬ ದಕ್ಷಿಣ ಭಾರತದಲ್ಲೇ ಅತ್ಯಂತ ದೊಡ್ಡದಾದ ಮಿಷನ್ನಿನ ಶಿಕ್ಷಣ ಪ್ರತಿಷ್ಠಾನವಿತ್ತು. ಅಲ್ಲಿ ಏಪ್ರಿಲ್ ೨೨ರಂದು ಉಪಾಸನಾ ಮಂದಿರದ ನವನಿರ್ಮಿತ ಭಾಗವೊಂದರ ಉದ್ಘಾಟನೆ ಮತ್ತು ಸರಸ್ವತೀ ದೇವಿಯ ವಿಗ್ರಹದ ಪ್ರತಿಷ್ಠಾಪನೆಗಾಗಿ ಆಯೋಜನೆ ನಡೆದಿತ್ತು. ಬೆಳಗ್ಗೆ ೯.೩೦ರಿಂದ ಅಪರಾಹ್ನ ೩ರವರೆಗೆ ನಡೆದ ಈ ಸಮಾರಂಭದಲ್ಲಿ ವಿರಜಾನಂದರು ಪಾಲ್ಗೊಂಡು ಎಲ್ಲರಿಗೂ ಪ್ರೋತ್ಸಾಹ ನೀಡಿದರು. ಪುರೋಹಿತರು ಉಚ್ಚರಿಸುತ್ತಿದ್ದ ದೇವೀ ಸಹಸ್ರನಾಮದ ಜೊತೆಜೊತೆಗೆ ವಿರಜಾನಂದರು ಒಂದು ಸಾವಿರ ಶ್ವೇತ ಪದ್ಮಗಳನ್ನು ದೇವಿಯ ಪಾದಕ್ಕೆ ಅರ್ಪಿಸಿದರು. ಇನ್ನೊಂದು ದಿನ ಅಲ್ಲಿಗೆ ಭೇಟಿಯಿತ್ತು ಎಲ್ಲ ವಿಭಾಗಗಳನ್ನೂ ವೀಕ್ಷಿಸಿದರು. ಇವರ ಪ್ರೋತ್ಸಾಹ-ಆಶೀರ್ವಾದ ಪಡೆದ ಅಲ್ಲಿಯ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿವರ್ಗದವರು ನವಚೈತನ್ಯವನ್ನು ಪಡೆದರು.

ಮಾಂಬಳಮ್‌ನ ಬಾಲಕರ ವಿದ್ಯಾಲಯದಲ್ಲಿ ಕಟ್ಟಬೇಕೆಂದಿದ್ದ ವಿದ್ಯಾರ್ಥಿನಿಲಯಕ್ಕೆ ಏಪ್ರಿಲ್ ೨೩ರಂದು ವಿರಜಾನಂದರು ಅಸ್ತಿಭಾರ ಹಾಕಿದರು. ಪ್ರಾಯಶಃ ದಿನವೂ ತೀವ್ರ ಆಕಾಂಕ್ಷೆಯುಳ್ಳ ಸ್ತ್ರೀ-ಪುರುಷರಿಗೆ ದೀಕ್ಷೆಯನ್ನು ನೀಡುತ್ತಿದ್ದರು. ನೂರಾರು ದರ್ಶನಾರ್ಥಿಗಳು ಮತ್ತು ಜಿಜ್ಞಾಸುಗಳೊಂದಿಗೆ ಬಹಳ ಸಮಯವನ್ನು ಕಳೆಯುತ್ತಿದ್ದರು. ಸಂಜೆಯಲ್ಲಿ ನೆರೆದವರ ಪ್ರಶ್ನೆಗಳಿಗೆ ಉತ್ತರವಿತ್ತು ಅವರೆಲ್ಲರಿಗೂ ತೃಪ್ತಿಯನ್ನು ನೀಡುತ್ತಿದ್ದರು. ಒಂದು ದಿನ ರಾತ್ರಿ ಊಟದ ನಂತರ ಸಾಧು-ಬ್ರಹ್ಮಚಾರಿಗಳೊಂದಿಗೆ ಕುಳಿತು ಹಳೆಯ ದಿನಗಳ ನೆನಪುಗಳನ್ನು ಹಂಚಿಕೊಂಡರು.

ಸಂಜೆಯ ಸಮಯ ಒಮ್ಮೊಮ್ಮೆ ವಿರಜಾನಂದರು ಸಮುದ್ರ ತೀರಕ್ಕೆ ಹೋಗಿ ತಿರುಗಾಡಿ ಬರುತ್ತಿದ್ದರು. ಒಂದು ದಿನ ಮಿಷನ್ ನಡೆಸುತ್ತಿದ್ದ ರಾಮಕೃಷ್ಣಪುರಂ ಹರಿಜನ ಕಾಲೋನಿಗೆ ಭೇಟಿಯಿತ್ತರು. ಅಲ್ಲಿ ನಗರದ ಬಡ ಹರಿಜನ ಕೂಲಿಗಳಿಗಾಗಿ ಚೊಕ್ಕಟವಾದ ಪರ್ಣಕುಟೀರ ಹಾಗೂ ರಸ್ತೆಗಳಿರುವ ಒಂದು ಚಿಕ್ಕ ಗ್ರಾಮವನ್ನೇ ನಿರ್ಮಿಸಲಾಗಿತ್ತು; ಮಕ್ಕಳಿಗಾಗಿ ಒಂದು ಶಾಲೆ ಸಹ ಇತ್ತು. ಅಲ್ಲಿಯ ೮೦ ಕುಟುಂಬಗಳು ಸೇರಿ ಒಂದೊಂದು ಪೈಸೆ ಚಂದಾ ಎತ್ತಿ ವಿಶಿಷ್ಟ ಅತಿಥಿಗಳೂ, ವರಿಷ್ಠ ಸಂನ್ಯಾಸಿಗಳೂ ಆದ ವಿರಜಾನಂದರಿಗೆ ಮಾಲೆಯನ್ನು ಕೊಂಡು ತಂದಿದ್ದರು. ಅಲ್ಲದೆ ಅವರೊಂದಿಗೆ ಫೋಟೋ ಒಂದನ್ನು ತೆಗೆಸಿಕೊಳ್ಳುವ ವ್ಯವಸ್ಥೆಯನ್ನು ಮಾಡಿದ್ದರು. ಎಲ್ಲವನ್ನೂ ಕಳೆದುಕೊಂಡಿರುವ ಈ ಬಡ ಜನರ ಹೃದಯ ವೈಶಾಲ್ಯತೆಯನ್ನು ಕಂಡು ವಿರಜಾನಂದರು ಚಕಿತರಾದರು. ‘ದರಿದ್ರನಾರಾಯಣ’ ಪದದ ಕರ್ತೃವಾದ ಗುರು ಸ್ವಾಮಿ ವಿವೇಕಾನಂದರ ನೆನಪು ಅವರಿಗೆ ಮತ್ತೆ ಮತ್ತೆ ಆಯಿತು.

ಸಮುದ್ರ ಮಟ್ಟದಿಂದ ಸುಮಾರು ಏಳೂವರೆ ಸಾವಿರ ಅಡಿಗಳಷ್ಟು ಎತ್ತರದಲ್ಲಿರುವ ನೀಲಗಿರಿ ಪರ್ವತಗಳ ಅಂಕುಡೊಂಕಾದ ದಾರಿಯಲ್ಲಿ ಮೋಟಾರು ಗಾಡಿಯೊಂದು ಓಡುತ್ತಿದೆ. ಸುತ್ತಲೂ ನಯನಮನೋಹರವಾದ ದೃಶ್ಯ. ವಿರಜಾನಂದರು ಮದ್ರಾಸಿನಿಂದ ಉದಕಮಂಡಲಕ್ಕೆ ಕೆಲದಿನಗಳ ಮಟ್ಟಿಗೆ ಹೋಗಿ, ಮತ್ತೆ ಮದ್ರಾಸಿಗೆ ಹಿಂತಿರುಗಿದರು. ಏಪ್ರಿಲ್ ೨೬ರಂದು ರಾತ್ರಿ ರೈಲು ಹತ್ತಿ ಮದ್ರಾಸನ್ನು ಬಿಟ್ಟು ಬೆಳಗ್ಗೆ ಪೊದುನೂರನ್ನು ತಲುಪಿದರು. ಅಲ್ಲೇ ಹತ್ತಿರದ ಗ್ರಾಮವಾದ ‘ಪೆರಿಯನಾಯಕನ ಪಾಳ್ಯಂ’ನಲ್ಲಿ ‘ರಾಮಕೃಷ್ಣ ಮಿಷನ್ ವಿದ್ಯಾಲಯ’ ಎಂಬ ದೊಡ್ಡ ಶಿಕ್ಷಣ ಸಂಸ್ಥೆಯಿದೆ. ಇದರ ಸ್ಥಾಪಕರು ಮತ್ತು ಕಾರ್ಯದರ್ಶಿಗಳಾದ ಶ್ರೀ ಅವಿನಾಶಿಲಿಂಗಂ ಚೆಟ್ಟಿಯಾರ್ ಅವರು ತಮ್ಮ ಕೆಲವು ಸಹೋದ್ಯೋಗಿಗಳೊಡನೆ ಮಹಾರಾಜರನ್ನು ಸ್ವಾಗತಿಸಲು ರೈಲ್ವೆ ನಿಲ್ದಾಣಕ್ಕೆ ಬಂದಿದ್ದರು. ಇವರು ತಮ್ಮ ಸ್ನೇಹಿತವರ್ಗದಲ್ಲಿ ‘ಅವಿನಾಶಿ’ ಎಂಬ ಹೆಸರಿನಿಂದಲೇ ಪರಿಚಿತರು. ಮದ್ರಾಸಿನಲ್ಲಿ ಓದುತ್ತಿರುವಾಗಲೇ ಯುವಕರಾದ ಅವಿನಾಶಿ ಮತ್ತು ಕೆಲವು ಸ್ನೇಹಿತರು ಮಠದ ಸಂಪರ್ಕಕ್ಕೆ ಬಂದು ರಾಮಕೃಷ್ಣ-ವಿವೇಕಾನಂದರ ವಿಚಾರಧಾರೆಯಿಂದ ಆಕರ್ಷಿತರಾಗಿದ್ದರು. ಸ್ವಾಮಿ ಚಿದ್ಭವಾನಂದ ಮತ್ತು ಸ್ವಾಮಿ ಆಗಮಾನಂದರು ಮಠ ಸೇರಿದ ಇವರ ಸ್ನೇಹಿತರಲ್ಲಿ ಇಬ್ಬರು. ಅವಿನಾಶಿ ಬ್ರಹ್ಮಚಾರಿಯಾಗಿಯೇ ಉಳಿದರು. ಇವರು ಸ್ವಾಮಿ ಶಿವಾನಂದರಿಂದ ಮಂತ್ರದೀಕ್ಷೆಯನ್ನು ಪಡೆದಿದ್ದರು. ಅಲ್ಲದೆ ಕಾಂಗ್ರೆಸ್ಸಿನ ಉತ್ತಮ ಕಾರ್ಯಕರ್ತರೂ ಸಹ. ಸ್ವಾಮೀಜಿಯವರು ಹಾಕಿಕೊಟ್ಟ ಶಿಕ್ಷಣದ ಆದರ್ಶಗಳ ಮೇರೆಗೆ ಈ ವಿದ್ಯಾಲಯವನ್ನು ೧೯೩೦ರಲ್ಲಿ ಸ್ಥಾಪಿಸಿದ್ದರು. ೧೯೩೪ರಲ್ಲಿ ಇದನ್ನು ರಾಮಕೃಷ್ಣ ಮಿಷನ್ನಿನ ಒಂದು ಶಾಖಾಕೇಂದ್ರವನ್ನಾಗಿ ಸ್ವೀಕರಿಸಲಾಯಿತು. (ಅನೇಕ ಎಕರೆಯುಳ್ಳ ಈ ಸಂಸ್ಥೆಯಲ್ಲಿ ಈ ವಿಭಾಗಗಳು ಇವೆ — ೧) ಪದವಿ ವಿದ್ಯಾಲಯ ೨) ಬುನಾದಿ ಶಿಕ್ಷಣ

೩ ಸ್ವಾಮಿ ರಾಮಕೃಷ್ಣಾನಂದರ ಪ್ರೇರಣೆಯಿಂದ ಕೆಲವು ಉತ್ಸಾಹೀ ಭಕ್ತರು ಈ ಸ್ಟೂಡೆಂಟ್ಸ್ ಹೋಮನ್ನು ೧೯೦೫ರಲ್ಲಿ ಪ್ರಾರಂಭಿಸಿದರು. ೧೯೧೮ರಲ್ಲಿ ಮಿಷನ್ ಅಧಿಕೃತವಾಗಿ ಇದರ ಜವಾಬ್ದಾರಿಯನ್ನು ಹೊತ್ತಿತು. ೧೯೨೧ರಲ್ಲಿ ಈ ಸ್ಟೂಡೆಂಟ್ಸ್ ಹೋಮ್ ತನ್ನ ಸ್ವಂತ ಕಟ್ಟಡವನ್ನು ಹೊಂದಿತು. ೧೯೨೨ರಲ್ಲಿ ಈ ಸಂಸ್ಥೆಗೆ ವಿದ್ಯಾರ್ಥಿನಿಲಯ ಸಹಿತವಾದ ಪದವಿಪೂರ್ವ ಶಿಕ್ಷಣವನ್ನು ಸೇರಿಸಲಾಯಿತು. ೧೯೨೫ ರಲ್ಲಿ ಕಲಾವಿಭಾಗವನ್ನೂ ಸಹ ತೆರೆಯಲಾಯಿತು.

ವಿದ್ಯಾಲಯ ೩) ಶಿಕ್ಷಕರ ತರಬೇತಿ ಕಾಲೇಜು ೪) ತಾಂತ್ರಿಕ ಮಹಾ ವಿದ್ಯಾಲಯ ೫) ಗ್ರಾಮಸೇವಾ ಶಿಕ್ಷಣ ಕಾಲೇಜು ೬) ಉಚಿತ ಚಿಕಿತ್ಸಾಲಯ)

ಬೇಸಿಗೆ ರಜೆಯಾದ್ದರಿಂದ ವಿದ್ಯಾಲಯದ ಬಹುತೇಕ ವಿದ್ಯಾರ್ಥಿಗಳು ಮನೆಗೆ ಹೋಗಿದ್ದರು. ಅಲ್ಲೇ ಉಳಿದಿದ್ದ ಕೆಲವು ಮಕ್ಕಳು ಮತ್ತು ಸಿಬ್ಬಂದಿ ವರ್ಗದವರು ಮಠಾಧ್ಯಕ್ಷರಿಗೆ ಸಾದರದ ಸ್ವಾಗತವನ್ನು ನೀಡಿದರು. ವಿರಜಾನಂದರು ಅಲ್ಲಿ ಎಲ್ಲೆಡೆ ಸುತ್ತಾಡಿ ವೀಕ್ಷಿಸಿದರು, ಎಲ್ಲರನ್ನೂ ಆಶೀರ್ವದಿಸಿದರು. ಅವಿನಾಶಿಯವರ ಒತ್ತಾಯದ ಮೇರೆಗೆ ಅಲ್ಲಿಯ ಪ್ರಾಂಗಣದಲ್ಲಿ ತಮ್ಮ ಭೇಟಿಯ ಸ್ಮರಣಾರ್ಥವಾಗಿ ಆಲದ ಸಸಿಯೊಂದನ್ನು ನೆಟ್ಟರು. ಸ್ವಲ್ಪ ವಿಶ್ರಮಿಸಿ ಉಪಹಾರ ಮುಗಿಸಿ ೯ ಗಂಟೆಗೆ ಮೋಟಾರು ಗಾಡಿಯಲ್ಲಿ ಪ್ರಯಾಣವನ್ನು ಮುಂದುವರಿಸಿದರು. ಅವಿನಾಶಿಯವರೂ ಅವರೊಂದಿಗೆ ಪಯಣಿಸಿದ್ದರು. ಚಿಕ್ಕ ಪಟ್ಟಣಗಳಾದ ಕೂನೂರು, ವಾಲೆಂಟಿನ್ ದಾಟಿ ಉದಕಮಂಡಲವನ್ನು (ಊಟಿ) ತಲುಪುವಷ್ಟರಲ್ಲಿ ೧೧ ಗಂಟೆಯಾಗಿತ್ತು. ಅಲ್ಲಿಯ ಆಶ್ರಮದ ಮುಖ್ಯಸ್ಥರು ಅವಿನಾಶಿಯವರ ಬಾಲ್ಯ ಸ್ನೇಹಿತರಾದ ಚಿದ್ಭವಾನಂದರು (ಚಿನು).

ಪೈನ್ ಮತ್ತು ನೀಲಗಿರಿ ಮರಗಳಿಂದ ನಿಬಿಡವಾದ ರಮಣೀಯವಾದ ಉದ್ಯಾನಗಳಿಂದ ತುಂಬಿ, ನಾನಾ ಗೃಹಗಳಿಂದ ಶೋಭಿತವಾದ, ಚೊಕ್ಕಟವಾದ ಊಟಿಯು ಕಲಾವಿದನು ಬಿಡಿಸಿದ ಚಿತ್ರದಂತೆ ತೋರುತ್ತಿತ್ತು. ಆ ನಗರವನ್ನು 'ಕ್ವೀನ್ ಆಫ್ ಹಿಲ್ ಸ್ಟೇಷನ್' (ಗಿರಿಧಾಮಗಳ ರಾಣಿ) ಎಂದು ಕರೆಯುವುದು ಸುಳ್ಳೇನಲ್ಲ! ಭಾರತದ ಅನೇಕ ಪ್ರಾಂತ್ಯದ ರಾಜರು (ಹೈದರಾಬಾದ್, ಮೈಸೂರು, ಬರೋಡಾ ಇತ್ಯಾದಿ) ಇಲ್ಲಿ ಬೇಸಿಗೆಯ ಅರಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಊಟಿಯಲ್ಲಿ ಮೋಟಾರಿನಲ್ಲಿ ಓಡಾಡಬಹುದಾದ ರಸ್ತೆಗಳ ಒಟ್ಟು ದೂರ ೧೦೦ ಮೈಲು. ಇಲ್ಲಿಯ ಇಲ್ಕ ಬೆಟ್ಟದ ಮೇಲೆ ಬಿಷಪ್ಸ್ ಡಾನ್ (ಈಗಿನ ರಾಮಕೃಷ್ಣ ನಗರ) ಎಂಬ ಅತಿ ರಮ್ಯವಾದ ಸ್ಥಾನದಲ್ಲಿ ರಾಮಕೃಷ್ಣ ಆಶ್ರಮವಿದೆ. ಸುಂದರವಾದ ಪುಟ್ಟ ಮಂದಿರ. ಮುಂದೆ ಒಂದು ಹಜಾರ. ಇಲ್ಲಿ ಎಲ್ಲರೂ ಒಟ್ಟಾರೆ ಉಪಾಸನೆ, ಪ್ರವಚನಾದಿಗಳನ್ನು ಮಾಡುತ್ತಾರೆ. ಈ ಆಶ್ರಮದೊಂದಿಗೆ ಪೂಜ್ಯ ಮಹಾಪುರುಷ ಮಹಾರಾಜರ ಪುಣ್ಯಸ್ಮೃತಿಯು ಗಾಢವಾಗಿ ಹೆಣೆದುಕೊಂಡಿದೆ. ಹೇಗೆಂದರೆ —

೧೯೨೪ರ ಬೇಸಿಗೆಯಲ್ಲಿ ಸ್ವಾಮಿ ಶಿವಾನಂದರು ಕೆಲವು ಸಂನ್ಯಾಸಿ, ಬ್ರಹ್ಮಚಾರಿಗಳೊಂದಿಗೆ ಕೂನೂರಿನ ಹತ್ತಿರದಲ್ಲೇ ಇರುವ 'ಸ್ಪ್ರಿಂಗ್‌ಫೀಲ್ಡ್' ಎಂಬಲ್ಲಿ ಬೀಡು ಬಿಟ್ಟಿದ್ದಾಗ ಉನ್ನತ ಆಧ್ಯಾತ್ಮಿಕ ಭಾವನೆಗಳನ್ನು ಉದ್ದೀಪನಗೊಳಿಸುವ ನೀಲಗಿರಿಗಳ ವಾತಾವರಣವು ಅವರನ್ನು ವಿಶೇಷವಾಗಿ ಆಕರ್ಷಿಸಿತು. ಅವರು ಅಲ್ಲಿ ಒಂದು ಆಶ್ರಮವನ್ನು ಸ್ಥಾಪಿಸುವ ಇಚ್ಛೆಯನ್ನು ಪ್ರಕಟಪಡಿಸಿದರು. ಇದನ್ನು ಕೇಳಿದ ಅಲ್ಲಿಯ ಭಕ್ತರು ಉತ್ಸಾಹಭರಿತರಾಗಿ ಯೋಗ್ಯ ಸ್ಥಳವನ್ನು ಹುಡುಕಲಾರಂಭಿಸಿದರು. ಅಷ್ಟರಲ್ಲಿ ಅನಿರೀಕ್ಷಿತವಾಗಿ ಅಲ್ಲಿಯ ಒಬ್ಬ ಮಡಿವಾಳನು ತನ್ನ ಸ್ವಲ್ಪ ಭೂಮಿಯನ್ನು ಇವರಿಗೆ ದಾನವಾಗಿ ಕೊಡುತ್ತೇನೆಂದು ತಿಳಿಸಿದ. ಆತನು, ತಾನು ಮೂರು ರಾತ್ರಿಗಳು ಸತತವಾಗಿ ತನ್ನ ಇಷ್ಟದೇವಿ ಶೀತಲಾಳನ್ನು[೪] ಕಂಡದ್ದಾಗಿ ತಿಳಿಸಿ, ದೇವಿಯು, 'ಯಾರಾದರೂ ವ್ಯಕ್ತಿಗಳು ದೇವಕಾರ್ಯ ನಿಮಿತ್ತ ಭೂಮಿಯನ್ನು ಹುಡುಕುತ್ತ ಬಂದರೆ ಇಲ್ಕ ಬೆಟ್ಟದ ನಿನ್ನ ಜಾಗವನ್ನು ಅವರಿಗೆ ದಾನ ಮಾಡು' ಎಂದು ಆದೇಶಿಸಿರುವುದಾಗಿ ನುಡಿದ. ಈ ಸ್ವಪ್ನ ವೃತ್ತಾಂತವವನ್ನು ಕೇಳಿದ ಶಿವಾನಂದರು ರೋಮಾಂಚಿತರಾದರು. ಆತನ ಎರಡು ಎಕರೆ ಭೂಮಿಯನ್ನು ಸ್ವೀಕರಿಸಿದರು. ಈ ಸ್ಥಳದಲ್ಲಿ ೧೯೨೪ರಲ್ಲಿ ಜುಲೈ ೧೧ರಂದು ಶಿವಾನಂದರು ಆಶ್ರಮದ ಅಸ್ತಿಭಾರವನ್ನು ಹಾಕಿದರು. ಆವಶ್ಯಕವಿರುವ ಧನ ಸಂಗ್ರಹಿಸಿ ನಿರ್ಮಾಣಕಾರ್ಯವನ್ನು ಮುಗಿಸಲು ಎರಡು ವರ್ಷ ಬೇಕಾಯಿತು. ಎರಡನೇ ಬಾರಿಗೆ ೧೯೨೬ರ ಜೂನ್‌ನಲ್ಲಿ ಶಿವಾನಂದರು ನೀಲಗಿರಿಗೆ ಬಂದಾಗ ಊಟಿಯ ಶ್ರೀ ಹಾತಿರಾಮ್ ಜೀ ಮಠದಲ್ಲಿ ಕೆಲವು ತಿಂಗಳು ತಂಗಿದ್ದರು. ಈ ಸಮಯದಲ್ಲೇ ಒಂದು ಶುಭದಿನ (೨೪ ಸೆಪ್ಟೆಂಬರ್ ೧೯೨೬) ಆಶ್ರಮದ ಉದ್ಘಾಟನೆಯನ್ನು ಮಾಡಿದರು. ತಾವೇ ಸ್ವತಃ ಮಂದಿರದಲ್ಲಿ ಶ್ರೀರಾಮಕೃಷ್ಣರ ಪಟವನ್ನು ಸ್ಥಾಪಿಸಿ ಪೂಜೆ ಹಾಗೂ ನೈವೇದ್ಯಗಳನ್ನು ಮಾಡಿದ್ದರು. ಇಲ್ಲಿ ಅವರು ಸರ್ವದಾ ಭಗವದ್ಭಾವದಲ್ಲಿ ತಲ್ಲೀನರಾಗಿರುತ್ತಿದ್ದರು. ಈ ಆಶ್ರಮದಲ್ಲಿಯೇ ಅವರು ಸ್ವಾಮಿ ಅವಿನಾಶಾನಂದ ಹಾಗೂ ಸ್ವಾಮಿ ಚಿದ್ಭವಾನಂದರಿಗೆ ಸಂನ್ಯಾಸ ದೀಕ್ಷೆಯನ್ನು ನೀಡಿದ್ದರು.

*(ಮುಂದುವರಿಯುವುದು)*

೪ 'Story of an Epoch' (ಈ ಗ್ರಂಥದ ಇಂಗ್ಲಿಷ್ ಆವೃತ್ತಿ) ನಲ್ಲಿ ಇರುವಂತೆ.

## ರಾಮನಾಮದ ಮಹಿಮೆ

ಒಂದು ಸಲ ಒಬ್ಬ ರಾಜ ಏನೋ ತಪ್ಪು ಮಾಡಿ, ಅನಂತರ ಒಬ್ಬ ಋಷಿಯ ಬಳಿಗೆ ಹೋದ. ತನ್ನ ಪಾಪಕ್ಕೆ ಪ್ರಾಯಶ್ಚಿತ್ತವಾಗಲಿ ಎಂದು ಅವನು ಹೋಗಿದ್ದ. ಆಗ ಋಷಿ ಸ್ನಾನ ಮಾಡಲು ಹೋಗಿದ್ದ. ಆಗ ಋಷಿಯ ಮಗನು ರಾಜನಿಗೆ ಹೇಳಿದ, 'ಮೂರು ಸಲ ರಾಮನಾಮವನ್ನು ಉಚ್ಚರಿಸು. ನಿನ್ನ ಪಾಪವೆಲ್ಲವೂ ಹೋಗುವುದು.' ಸ್ನಾನವನ್ನು ಮುಗಿಸಿ ಬಂದ ಋಷಿಗೆ ಅವನ ಮಗ ವಿಷಯವನ್ನೆಲ್ಲ ತಿಳಿಸಿದ. ಅದನ್ನು ಕೇಳಿದ ಋಷಿ ಮಗನಿಗೆ ಬೈದು ಹೇಳಿದ: ''ಅಯೋಗ್ಯ! ನಿನಗೆ ರಾಮನಾಮದಲ್ಲಿ ಸಂಪೂರ್ಣ ನಂಬಿಕೆಯಿಲ್ಲವೆ? ಮೂರು ಬಾರಿ ರಾಮನಾಮವನ್ನು ಉಚ್ಚರಿಸಬೇಕೆ? ಒಂದೇ ಬಾರಿ ಅವನ ನಾಮವನ್ನು ಉಚ್ಚರಿಸಿದ್ದರಿಂದಲೇ ಲಕ್ಷ ಬಾರಿ ಮಾಡಿದ ಪಾಪಗಳೆಲ್ಲವೂ ತೊಲಗಿ ಹೋಗುವುದೆಂದು ನಿನಗೆ ಗೊತ್ತಿಲ್ಲವೆ?'' *(ಸ್ವಾಮಿ ವಿಜ್ಞಾನಾನಂದರ 'Sri Ramakrisha Life and Message' ಗ್ರಂಥದಿಂದ, ಪು. ೨೩೫)*